'ನಿರರ್ಥಕವಾಯಿತು!'
'ಏನಪ್ಪಾ?'
'ತಲೆಮರೆಸಿಕೊಂಡ ದ್ರೋಹಿ!'
ಆತ ಎದ್ದು ಬೆಲ್ಟ್ ತೆಗೆದು ಬಟನ್ ಬಿಚ್ಚುತ್ತಾ ಆಜ್ಞಾಪಿಸಿದ:
'ಊಟ ತೆಗೆದುಕೊಂಡು ಬಾ.'
'ಅಪ್ಪ, ನೀವು ಊಟ ಮಾಡಲಿಲ್ಲವೇ?'
'ಎಲ್ಲಿಂದ ಊಟ ಮಾಡುವುದು?' ಕೆಂಪಾದ ಕಣ್ಣುಗಳು, ಕೋರೆಮೀಸೆಯು ಅವಳತ್ತ ತಿರುಗಿದವು. ಭಾರ್ಗವಿ ಬಡಿಸಿಕೊಟ್ಟ ಅನ್ನ ಊಟ ಮಾಡಿ, ಕೈ ತೊಳೆದು ಬರುವಾಗ ಅಪ್ಪ ಕೇಳಿದರು:
'ಇಲ್ಲಿ ಈ ಕೆಸರು ತುಳಿದು ಬಂದವರ್‍ಯಾರು?'
ಭಾರ್ಗವಿಯ ಆಂತರ್ಯ ಬೆಚ್ಚಿತು! ಅವಳು ಹೇಳಿದಳು:
'ನಾನಪ್ಪ ಅದು!'
'ಹೆಣ!'

## 2

ನೀಲಿ ಬ್ಲೌಸ್, ಸೊಂಟಕ್ಕೆ ಕೆಂಪು ಅಂಚಿನ ನೀಲಿ ಸೀರೆಯನ್ನು ಉಟ್ಟು ಕನ್ನಡಿ ನೋಡುತ್ತ, ಹುಬ್ಬುಗಳ ನಡುವೆ ಕುಂಕುಮ ಬೊಟ್ಟು ಇರಿಸಿ ಭಾರ್ಗವಿ ಕಾದಳು. 'ಟಿಕ್ ಟಿಕ್' ಎಂದು ಬಡಿಯುತ್ತಿದ್ದ ಹೃದಯ. ಬಾಲಚಂದ್ರನ ಬಿಳಿಚಿದ ಬೆಳಕಿಗೆ ಬಾಳೆಯ ತೋಟದಲ್ಲಿ ನಿಶ್ಶಬ್ದ. ನೆರಳುಗಳು ಅಲುಗಾಡುತ್ತಿವೆಯೋ? ತರಗೆಲೆಗಳು ಶಬ್ದಿಸುತ್ತಿವೆಯೋ?

ಭಾನುವಾರ ಮಧ್ಯರಾತ್ರಿ ಕಳೆಯಿತು. ಜಗದೀಶನ ಕುರಿತು ಯಾವುದೇ ಸೂಚನೆಯಿಲ್ಲದೆ ಸೋಮವಾರ ಬೆಳಗಾಯಿತು. ಮುಂದುವರಿದು ಮಂಗಳವಾರವೂ ಆಯಿತು. ಅಂದಿನ ಪತ್ರಿಕೆಯಲ್ಲಿ ಅವಳು ಓದಿದಳು.

'ಸೆರೆಸಿಕ್ಕದ ಜಗದೀಶನಿಗೆ ಆಶ್ರಯ ನೀಡಿದ ರಾಮಾಚಾರ್ ಎಂಬ ಕೃಷಿಕನನ್ನು ನಿನ್ನೆ ರಾತ್ರಿ ಬಂಧಿಸಲಾಗಿದೆ. ಜಮೀನ್ದಾರನೂ ಗವರ್ಮೆಂಟಿನ ಭಾಗವಾಗಿರುವ ಶಂಕರ ನಾಯರ ಉಸ್ತುವಾರಿ ಅಯ್ಯಪ್ಪನ್ ಪಿಳ್ಳೈ, ಜಗದೀಶನನ್ನು ರಾಮಾಚಾರರ ಮನೆಯಲ್ಲಿ ಕಂಡಿದ್ದು, ಆ ವಿವರವನ್ನು ಆತ ಪೊಲೀಸಿಗೆ ತಿಳಿಸಿದ. ಆದರೆ ಜಗದೀಶ ಕೈಗೆ ಸಿಗದೆ ತಪ್ಪಿಸಿಕೊಂಡಿದ್ದಾನೆ. ಆತನನ್ನು ಕುರಿತ ಮಾಹಿತಿಗಳನ್ನು ಅಧಿಕಾರಿಗಳಿಗೆ ತಿಳಿಸುವವರಿಗೆ ಸೂಕ್ತವಾದ ಪಾರಿತೋಷಕ ನೀಡುವುದಲ್ಲದೆ ಆಶ್ರಯ ಕೊಡುವವರನ್ನು ಶಿಕ್ಷಿಸಲಾಗುವುದು...'

ದೀರ್ಘ ನಿಟ್ಟುಸಿರಿನೊಡನೆ ಅವಳು ಪತ್ರಿಕೆ ಕೆಳಗೆ ಹಾಕಿದಳು, ಜನ ಸೇರಿದ ಬೀದಿಯತ್ತ ನೋಡುತ್ತ ಕಿಂಡಿಯ ಸಮೀಪ ನಿಂತಳು.

ಮಧ್ಯರಾತ್ರಿ ಕಳೆದರೂ ಅವಳಿಗೆ ನಿದ್ದೆ ಬರಲಿಲ್ಲ. ಅಪ್ಪನ ಗೊರಕೆಯ ಸದ್ದನ್ನು ಎಡಬಿಡದೆ ಕೇಳಿಸಿಕೊಳ್ಳುತ್ತ ಅವಳು ಮಲಗಿದಳು.

ಹಾಗೆ ಅವಳು ಅರೆಪ್ರಜ್ಞಾವಸ್ಥೆಗೆ ತಲುಪಿದಳು. ಆಗ 'ಭಾರ್ಗವಿ!' ಎಂಬೊಂದು ಕರೆ! ತುಂಬಾ ಮಿದುವಾಗಿತ್ತಾದರೂ ಅವಳ ಹೃದಯ, ಅವಳ ಆತ್ಮ ಅದನ್ನು ಕೇಳಿಸಿಕೊಂಡಿತು. ಅವಳ ಮೈ ಕಾವೇರಿತು. ಮೆಲ್ಲಗೆ ತುಂಬಾ ಮೆಲ್ಲಗೆ ಅವಳು ಎದ್ದಳು. ಬಾಗಿಲು ಸದ್ದಿಲ್ಲದೆ ತೆಗೆದು ವರಾಂಡಕ್ಕೆ ಬಂದಳು. ಬಾವಿಯ ಕಟ್ಟೆಯಿಂದ ಜಗದೀಶ ಎದ್ದ.... ಮೋಡಗಳೆಡೆಯಿಂದ ಇಣುಕಿ ನೋಡಿದ ಚಂದ್ರ ಏನನ್ನೋ ಕಂಡು ನಾಚಿಕೊಂಡಂತೆ ಮರಳಿ ಕಾರ್ಮೋಡಗಳಲ್ಲಿ ಮರೆಯಾದ. ಅವನ ಕಿವಿಯಲ್ಲಿ ಅವಳು ಪಿಸುಗುಟ್ಟಿದಳು.